ದಿನಾಂಕ: 18/11/2020 ರಂದು ಸಾಕ್ಷಿಯನ್ನು ಪುನ:ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು

ಪಾಟೀ ಸವಾಲು : ತೀರ್ಪುಋಣಿದಾರನ ಪರ: ಶ್ರೀ. ಎಸ್. ಎಮ್. ಎನ್. ವಕೀಲರಿಂದ

ಈ ಪ್ರಕರಣದ ಜೆ.ಡಿ ಆರ್ ನ ಮೇಲೆ ಇಪಿ ನಂ.1/2015 ಎಂದು ಇನ್ನೊಂದು ಪ್ರಕರಣ ಸಲ್ಲಿಸಿದ್ದೇನೆ. ಸದರಿ ಪ್ರಕರಣಕ್ಕೂ ಮತ್ತು ಪ್ರಸ್ತುತ ಪ್ರಕರಣಕ್ಕೂ ಒಂದಕ್ಕೊಂದು ಸಂಬಂಧಿಸಿಲ್ಲ. ಭಾಲ್ಕಿ ನಗರ ಪೋಲಿಸ್ ಠಾಣೆಯಲ್ಲಿ ಈ ಪ್ರಕರಣದ ಜೆ. ಡಿ. ಆರ್ ನ ಮೇಲೆ ದಿನಾಂಕ: 23-12-2015 ರಂದು ಪ್ರಕರಣದ ದಾಖಲಿಸಿದ್ದು, ಅದರ ಸಂ. 498/2015 ಎಂದು ಇದೆ ಎಂದರೆ ಸರಿ. ಇಪಿ. ನಂ-1/2015 ರಲ್ಲಿ ಸಿ. ಸಿ. ನಂ-364/2013 ರ ಪ್ರತಿ ನೀಡಿದ್ದೇನೆ. ಪ್ರಸ್ತುತ ಇ.ಪಿ ಅಡಿಯಲ್ಲಿರುವ ಆಸ್ತಿಯು ಪೂರ್ವ-ಪಶ್ಚಿಮ-110 ಅಡಿ, ಹಾಗೂ ಉತ್ತರ-ದಕ್ಷಿಣ-45 ಅಡಿ ಇದೆ. ಜಬ್ಬಾರ ಅನ್ನುವ ವ್ಯಕ್ತಿ ನಾನು ಸಲ್ಲಿಸಿದ ಇ.ಪಿ ನಂ.1/2015 ರಲ್ಲಿ ತನ್ನನ್ನು ಪ್ರಕರಣದಲ್ಲಿ ಸೇರಿಸುವಂತೆ ಅರ್ಜಿ ಸಲ್ಲಿಸಿದ್ದಾನೆ. ಪ್ರಕರಣದ ಆಸ್ತಿ ಜಬ್ಬಾರನಿಗೆ ಸಂಬಂಧಿಸಿದ್ದು, ಮತ್ತು ಆತ ಮನೆ ಕಟ್ಟಿಕೊಂಡು ವಾಸವಿದ್ದಾನೆಂದರೆ ಸರಿಯಲ್ಲ. ಸದರಿ ಪ್ರಕರಣದ ಆಸ್ತಿಯಲ್ಲಿ ಸದ್ಯ ಜಬ್ಬಾರನ ಮನೆ ಇದೆ, ಸಾಕ್ಷಿ ಮುಂದುವರೆದು ಕಾನೂನು ಬಾಹಿರವಾಗಿ ಸ್ವಾಧೀನ ಮಾಡಿಕೊಂಡಿದ್ದಾನೆಂದು ಹೇಳುತ್ತಾಳೆ. ಕಳೆದ 6-7 ವರ್ಷಗಳಿಂದ ಜಬ್ಬಾರನು ಪ್ರಕರಣದ ಆಸ್ತಿಯಲ್ಲಿ ಅನಧಿಕೃತವಾಗಿ ಉಳಿದಿದ್ದಾನೆ. ಜಬ್ಬಾರನ ವಿರುದ್ಧ ನ್ಯಾಯಾಲಯದಲ್ಲಿ ಏನಾದರೂ ಕ್ರಮ ಕೈಕೊಂಡಿದ್ದೀರಾ ಎಂದರೆ, ಸಾಕ್ಷಿ ಆತನ ಮೇಲೆ ಅಪರಾಧಿಕ ಕ್ರಮ ಕೈಕೊಂಡಿರುತ್ತೇನೆಂದು ಹೇಳುತ್ತಾಳೆ. ಜಬ್ಬಾರನ ಮೇಲೆ ಸಿವ್ಹಿಲ್ ಕ್ರಮ ಕೈಕೊಂಡಿಲ್ಲ ಆದರೆ, ಈಗಾಗಲೇ ದರಖಾಸ್ತ ಅರ್ಜಿ ಚಾಲ್ತಿಯಲ್ಲಿದೆ.

ಪ್ರಕರಣದ ಆಸ್ತಿ ಕುರಿತು ಈಗಲೂ ಕೂಡಾ ಕಂದಾಯ ಪಹಣಿಯಲ್ಲಿದೆ. ಸದರಿ ಕಂದಾಯ ಪಹಣಿಯು ಈಗಲೂ ಕೂಡಾ ನನ್ನ ಅಜ್ಜಿಯಾದ ಸುಗುರಾಬೀ ರವರ ಹೆಸರಿನಲ್ಲಿದೆ. ಸದರಿ ಪಹಣಿ ಕುರಿತು ಇದುವರೆಗೂ ಎನ್. ಎ. ವಗೈರೆ ಆಗಿರುವುದಿಲ್ಲ. ಈ ಪ್ರಕರಣದಲ್ಲಿ ತಿಳಿಸಿದಂತೆ ಸ್ಥಳದಲ್ಲಿ ಯಾವದೇ ನಿವೇಶನ ಇಲ್ಲ ಎಂದರೆ ಸರಿಯಲ್ಲ. ನನ್ನ ನಿವೇಶನದ ಪೂರ್ವಕ್ಕೆ- ಒಬ್ಬ ಮುಸ್ತಫಾ ಅಂಬುವವರ ಗುಂಟಾ ಪ್ಲಾಟಿದೆ ಎಂದರೆ ಸರಿಯಲ್ಲ. ಮುಸ್ತಫಾನ ಪ್ಲಾಟಿನ ಪಶ್ಚಿಮಕ್ಕೆ-ಒಬ್ಬ ಜಬ್ಬಾರನ ಮನೆ ಇದೆ ಎಂದರೆ

ಸರಿಯಲ್ಲ. ಜೆ. ಡಿ. ಆರ್ ನ ಆಸ್ತಿ ವ ಯಾವದೇ ಹಿತಾಸಕ್ತಿ ಇರದಿದ್ದರೂ ಸಹ ಆತನ ವಿರುದ್ಧ ಸುಳ್ಳು ಅರ್ಜಿ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಪ್ರಸ್ತುತ ಅರ್ಜಿಯಲ್ಲಿ ಹಾಗೂ ದರಖಾಸ್ತ ಅರ್ಜಿ ನಂ.1/2015 ರಲ್ಲಿ ಸಿ.ಸಿ. ನಂ.364/2013 ಎಂದು ನಮೂದಿಸಿದ್ದೇನೆಂದರೆ ಸರಿ. ಸಾಕ್ಷಿ ಮುಂದುವರೆದು ಈ ಅರ್ಜಿಯಲ್ಲಿ ಸಿ.ಸಿ. ನಂ.507/2016 ರ ಕುರಿತು ಸಹ ತಿಳಿಸಿದ್ದೇನೆ. ಪ್ರಸ್ತುತ ಅರ್ಜಿಯಲ್ಲಿ ಸಿ.ಸಿ.ನಂ.507/2016 ರ ಕುರಿತು ನಮೂದಿಸಿಲ್ಲ ಎಂದರೆ ಸರಿ. ಓ. ಎಸ್. ನಂ. 57/2009 ನ್ನು ಈ ಪ್ರಕರಣದ ಜೆ. ಡಿ. ಆರ್ ನ ಮೇಲೆ ಸಲ್ಲಿಸಿದ್ದೆ. ಈ ಪ್ರಕರಣದ ಜೆ. ಡಿ. ಆರ್ ನಿಗೆ ಸಂಬಂಧಿಸಿದ ಯಾವದೇ ಸ್ವತ್ತು ಇರದಿದ್ದರೂ ಸಹ ಮತ್ತು ಆತ ಯಾವದೇ ರೀತಿ ಸಂಬಂಧಿಸಿದ್ದರೂ ಸಹ ಆತನ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದೆ ಎಂದರೆ ಸರಿಯಲ್ಲ. ಜೆ. ಡಿ. ಆರ್ ನ ಮೇಲೆ ಸುಳ್ಳು ಅರ್ಜಿ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಈ ಪ್ರಕರಣದಲ್ಲಿಯ ಆಸ್ತಿಯಲ್ಲ ಒಬ್ಬ ಜಬ್ಬಾರ ಅಂಬುವವನು ಮನೆ ಕಟ್ಟಿಕೊಂಡು ವಾಸಿಸುತ್ತಿರುವುದು ನನಗೆ ಮಾಹಿತಿ ಇದ್ದರೂ ಸಹ ಆತನ ಮೇಲೆ ಕ್ರಮ ಕೈಗೊಳ್ಳದೆ ಪ್ರಸ್ತುತ ಜೆ. ಡಿ. ಆರ್ ನ ಮೇಲೆ ಅರ್ಜಿ ಸಲ್ಲಿಸಿರುತ್ತೆನೆಂದರೆ ಸರಿಯಲ್ಲ. ಜಬ್ಬಾರನ ಮನೆ ಪೂರ್ವಕ್ಕೆ-ಮುಸ್ತಫಾನ ಪ್ಲಾಟ್ ಇದೆ ಎಂದರೆ ಸರಿಯಲ್ಲ. ನನಗೆ ಸಂಬಂಧಿಸಿದ ಯಾವದೇ ಆಸ್ತಿ ಇರದಿದ್ದರೂ ಸಹ ಸುಳ್ಳು ಪ್ರಕರಣ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣ: ಇಲ್ಲ.

( ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ. ಹೇ. ಕೇ. ಸರಿ ಇದೆ

ಹೆಚ್ಚುವರಿ ಜೆ. ಎಮ್. ಎಮ್. ಎಫ್,

ಭಾಲ್ಕಿ